# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. :53 ಪ್ರಾ.ಸಾ. :21**

| | | |
|---|---|---|
| ಸಾಕ್ಷಿಯ ಹೆಸರು | : | ರವೀಂದ್ರ ಎಸ್.ಮಾಸ್ಕರ್ |
| ತಂದೆಯ ಹೆಸರು | : | ಶಿವರಾಮ ಮಾಸ್ಕರ್ |
| ವಯಸ್ಸು | : | 47 ವರ್ಷ |
| ಕೆಲಸ | : | ಅರಣ್ಯ ಕಾವಲುಗಾರ, ಅಣಶಿ ವಲಯ, ಸಾಕಳಿ ಅರಣ್ಯ ಚೆಕ್ ಗೇಟ್ |
| ವಾಸ | : | ಕದ್ರಾ, ಕಾರವಾರ |

**ದಿನಾಂಕಃ 14-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. ನಾನು 2012 ರಿಂದ ಇಲ್ಲಿಯವರೆಗೆ ಅಣಶಿ ಅರಣ್ಯ ವನ್ಯಜೀವಿ ವಲಯದ ಸಾಕಳಿ ಅರಣ್ಯ ಚೆಕ್ ಗೇಟಿನಲ್ಲಿ ಅರಣ್ಯ ಇಲಾಖೆಯ ದಿನಗೂಲಿ ಕಾವಲುಗಾರನಾಗಿ ಕೆಲಸ ಮಾಡುತ್ತಾ ಬಂದಿರುತ್ತೇನೆ. ನಾನು ಚೆಕ್ ಗೇಟಿನಲ್ಲಿ ಕರ್ತವ್ಯ ನಿರ್ವಹಿಸುವಾಗ ಸದರಿ ಗೇಟಿನ ಮೂಲಕ ಹಾದುಹೋಗುವ ಎಲ್ಲಾ ವಾಹನಗಳ ತಪಾಸಣೆ ಮಾಡುತ್ತೇವೆ. ಹಾಗೂ ಯಾವುದೇ ಖಾಸಗಿ ವಾಹನಗಳು ಹಾದುಹೋದಲ್ಲಿ ಸದರಿ ವಾಹನಗಳ ನಂಬರನ್ನು ಗೇಟಿನಲ್ಲಿರಿಸಿದ ರಿಜಿಸ್ಟರಿನಲ್ಲಿ ನಮೂದು ಮಾಡುತ್ತೇವೆ, ಆದರೆ ಬೈಕುಗಳು ಹೋದರೆ ಅವುಗಳ ನಂಬರುಗಳನ್ನು ನಮೂದಿಸುವುದಿಲ್ಲ. ಸದರಿ ಸಾಕಳಿ ಅರಣ್ಯ ಚೆಕ್ ಗೇಟ್‌ನಲ್ಲಿ ಬೆಳಗಿನ ಸಮಯದಲ್ಲಿ ಒಬ್ಬ ಕಾವಲುಗಾರ ಇರುತ್ತೇವೆ ಹಾಗೂ ರಾತ್ರಿಯ ಸಮಯದಲ್ಲಿ ಇಬ್ಬರು ಕಾವಲುಗಾರರು ಇರುತ್ತೇವೆ. ನಮ್ಮ ಕೆಲಸದ ಸಮಯವು ಬೆಳಿಗ್ಗೆ 9.00 ಗಂಟೆಯಿಂದ ಪ್ರಾರಂಭವಾದರೆ, ಮರುದಿನ ಬೆಳಗ್ಗೆ 9.00 ಗಂಟೆಯವರೆಗೆ ಇರುತ್ತದೆ. ನಮಗೆ ಏನಾದರು ವೈಯಕ್ತಿಕ ಸಮಸ್ಯೆಗಳು ಇದ್ದಲ್ಲಿ, ನಮ್ಮ ಪಾಳಿಯ ಬದಲಾವಣೆಯಾಗುತ್ತದೆ. ರಾತ್ರಿ ಪಾಳಿಗೆ 2 ನೇ ಕಾವಲುಗಾರ ರಾತ್ರಿ 9.00 ಗಂಟೆಗೆ ಬಂದು ಬೆಳಿಗ್ಗೆ 9.00 ಗಂಟೆಯವರೆಗೆ ನಮ್ಮೊಂದಿಗೆ ಇರುತ್ತಾನೆ. ಸಾಕಳಿ ಅರಣ್ಯ

ಚೆಕ್ ಗೇಟ್ ನಲ್ಲಿರಿಸಲಾದ ರಿಜಿಸ್ಟರ್ ಕದ್ರಾದ ಉಪ ವಲಯ ಅರಣ್ಯಾಧಿಕಾರಿ ಹಾಗೂ ಅರಣ್ಯಾಧಿಕಾರಿಯವರ ಮೇಲ್ವಿಚಾರಣೆಯಲ್ಲಿರುತ್ತದೆ.

2. ಕದ್ರಾ ಪೊಲೀಸರು ಬಂದು ನನ್ನ ಬಳಿ ಎಂ.ಹೆಚ್-04/ಬಿ.ಕೆ-0726 ನಂಬರಿನ ಮಾರುತಿ ಕಾರು ಯಾವ ದಿನಾಂಕದಂದು ನಮ್ಮ ಚೆಕ್ ಗೇಟಿನ ಮೂಲಕ ಹಾದುಹೋಗಿರುತ್ತದೆ ಎಂದು ಮಾಹಿತಿ ಕೇಳಿದ್ದು, ಅದರಂತೆ ನಾನು ನಮ್ಮ ಸಾಕಳಿ ಅರಣ್ಯ ಚೆಕ್ ಗೇಟ್ ನಲ್ಲಿರಿಸಲಾದ ರಿಜಿಸ್ಟರನ್ನು ಪರಿಶೀಲಿಸಿ ಸದರಿ ಕಾರು ದಿಃ 16-10-2018 ರಂದು ಮಧ್ಯಾಹ್ನ 3.11 ಗಂಟೆಗೆ ಕಾರವಾರದ ಕಡೆಯಿಂದ ಕದ್ರಾದ ಕಡೆಗೆ ಹಾದು ಹೋಗಿರುವುದಾಗಿ ತಿಳಿಸಿರುತ್ತೇನೆ. ಆನಂತರ ಕಾರವಾರದ ವೃತ್ತ ನಿರೀಕ್ಷಕರು ಅಣಶಿ ವಲಯ ಅರಣ್ಯಾಧಿಕಾರಿಗೆ ಕೋರಿಕೆ ಪತ್ರ ನೀಡಿದ್ದು, ಅದರಲ್ಲಿ ದಿಃ 16-10-2018 ರಂದು ಎಂ.ಹೆಚ್-04/ಬಿ.ಕೆ-0726 ವಾಹನವು ಸಾಕಳಿ ಚೆಕ್ ಗೇಟಿನ ಮೂಲಕ ಹಾದುಹೋದ ಬಗ್ಗೆ ಮಾಹಿತಿ ಕೋರಿರುತ್ತಾರೆ ಹಾಗೂ ಆದಿನ ಸಾಕಳಿ ಚೆಕ್ ಗೇಟಿನಲ್ಲಿ ವಾಹನವನ್ನು ತಪಾಸಣೆ ಮಾಡಿದ ಸಿಬ್ಬಂದಿಯ ವಿವರವನ್ನು ನೀಡುವಂತೆ ಕೋರಿರುತ್ತಾರೆ. ಅದರಂತೆ ನಮ್ಮ ವಲಯ ಅರಣ್ಯಾಧಿಕಾರಿಗಳು ನಾವು ಸಾಕಳಿ ಚೆಕ್ ಗೇಟಿನಲ್ಲಿ ನಿರ್ವಹಿಸಿದ ರಿಜಿಸ್ಟರ್ ಹಾಗೂ ವಾಹನ ತಾಪಸಣೆಯ ದಾಖಲೆಗಳ ದೃಢೀಕೃತ ಪ್ರತಿಯನ್ನು ಕಾರವಾರದ ವೃತ್ತ ನಿರೀಕ್ಷಕರಿಗೆ ನೀಡಿರುತ್ತಾರೆ. ಆನಂತರ ದಿಃ 16-10-2018 ರಂದು ನಾನು ಕರ್ತವ್ಯ ನಿರ್ವಹಿಸಿದ ದಿನದಂದು ರಿಜಿಸ್ಟರ್ ಪ್ರತಿಯನ್ನು ನನ್ನ ಕೈ ಬರಹದಲ್ಲಿ ಬೆಳಿಗ್ಗೆ 9.00 ಗಂಟೆಯಿಂದ ಬರೆದಿರುತ್ತೇನೆ. ಸದರಿ ರಿಜಿಸ್ಟರಿನ ದೃಢೀಕೃತ ಪ್ರತಿಯ 4 ಪುಟಗಳನ್ನು ಈಗ ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-54 ಎಂದು ಹಾಗೂ ಸದರಿ ದಾಖಲೆಯಲ್ಲಿ ವಾಹನದ ನಂ. ಎಂ.ಹೆಚ್-04/ಬಿ.ಕೆ-0726 ನಮೂದಾಗಿರುವ ಭಾಗವನ್ನು ನಿಪಿ-54(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಮ್ಮ ವಲಯ ಅರಣ್ಯಾಧಿಕಾರಿಗಳು ಸಹಿ ಮಾಡಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿಯ ಪರ ಶ್ರೀ ಎ.ಎ.ಎ. ವಕೀಲರಿಂದಃ-**

ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

3. ಕಾರವಾರದಿಂದ ಜೊಯಿಡಾವರೆಗೆ ಒಟ್ಟು 2 ಚೆಕ್ ಪೋಸ್ಟ್ ಗಳು ಇದ್ದು, ಒಂದು ಕದ್ರಾ ಚೆಕ್ ಪೋಸ್ಟ್ ಹಾಗೂ ಇನ್ನೊಂದು ಕುಂಬಾರವಾಡ ಚೆಕ್ ಪೋಸ್ಟ್ ಇರುತ್ತವೆ. ಕದ್ರಾ (ಸಾಕಳಿ) ಚೆಕ್ ಪೋಸ್ಟಿನ ಮೂಲಕ ಬಂದು ಹೋಗುವ ವಾಹನಗಳ ನಂಬರುಗಳನ್ನು ನಾವು ರಿಜಿಸ್ಟರಿನಲ್ಲಿ ನಮೂದಿಸುತ್ತೇವೆ. ದಿಃ 16–10–2018 ರಂದು ನನ್ನ ಪಾಳಿಯು ಬೆಳಿಗ್ಗೆ 9.00 ಗಂಟೆಗೆ ಶುರುವಾಗಿರುತ್ತದೆ ಹಾಗೂ ಆದಿನ ನಾನು ರಾತ್ರಿ 9.00 ಗಂಟೆಯವರೆಗೆ ಮಾತ್ರ ನನ್ನ ಪಾಳಿಯ ಕೆಲಸ ಮಾಡಿ ಹೋಗಿರುತ್ತೇನೆ. ನಿಪಿ–54 ರಲ್ಲಿ ಸಂಜೆ 5.48 ಗಂಟೆಯ ವರೆಗೆ ನಾನು ಬರೆದಿರುವ ಅಕ್ಷರಗಳು ಇರುತ್ತವೆ. ಆದಿನ ನಾನು 5.48 ರ ನಂತರ ಮನೆಗೆ ಹೋಗಿದ್ದು, ಬೇರೆಯವರು ಪಾಳಿಗೆ ಬಂದಿರುತ್ತಾರೆ. ದಿಃ 16–10–2018 ರ ಮೊದಲು ಯಾವ ದಿನದಂದು ನಾನು ಕೆಲಸ ಮಾಡಿದ್ದೇನೆ ಎಂದು ದಾಖಲೆ ನೋಡಿ ಹೇಳಬೇಕಾಗುತ್ತದೆ. ನಾನು ದಿಃ 16–10–2018 ರಂದು ಬೆಳಿಗ್ಗೆ 9.00 ಗಂಟೆಗೆ ಪಾಳಿಗೆ ಬರುವ ಮೊದಲು ಚೆಕ್ ಪೋಸ್ಟ್ ನ ರಿಜಿಸ್ಟರನ್ನು ನನ್ನ ಹಿಂದಿನ ಪಾಳಿಯವರು ಬರೆದಿರುತ್ತಾರೆ. ದಿಃ 16–10–2018 ರಂದು 9.00 ಗಂಟೆಗೆ ನನಗೆ ಚಾರ್ಜ್ ನೀಡಿದವರ ಹೆಸರನ್ನು ನನಗೆ ಈಗ ಹೇಳಲು ಬರುವುದಿಲ್ಲ. ನಾನು ದ್ವಿತೀಯ ಪಿ.ಯು.ಸಿ. ವರೆಗೆ ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ–54 ರಲ್ಲಿ ವಾಹನ ನಂ.ಎಂ.ಹೆಚ್–04/ಬಿ.ಕೆ–0726 ಎಂದು ಬರೆದಿರುವ ಜಾಗ, ಅಂದರೆ ನಿಪಿ–54(ಎ) ನ್ನು ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಮ್ಮ ಚೆಕ್ ಪೋಸ್ಟಿಗೆ ಬಂದು ಮಾಹಿತಿ ಪಡೆದ ಪೊಲೀಸರ ಹೆಸರು ನನಗೆ ನೆನಪಿಲ್ಲ ಹಾಗೂ ಅವರು ಯಾವ ದಿನಾಂಕದಂದು ಬಂದಿದ್ದರು ಎಂದೂ ಸಹ ನನಗೆ ನೆನಪಿಲ್ಲ. ಆರ್.ಎಫ್.ಓ. ರವರು ಚೆಕ್ ಪೋಸ್ಟಿನಲ್ಲಿ ಹಾದುಹೋದ ವಾಹನಗಳ ಮಾಹಿತಿಯನ್ನು ರಿಜಿಸ್ಟರಿನಲ್ಲಿ ನಮೂದಿಸಿರುವ ಬಗ್ಗೆ ಪರಿಶೀಲಿಸುವಂತೆ ಹೇಳಿದ ನಂತರ ನಾವು 2–3 ದಿನಗಳ ರಿಜಿಸ್ಟರುಗಳನ್ನು ಪರಿಶೀಲಿಸಿರುತ್ತೇವೆ. ನಾವು ರಿಜಿಸ್ಟರುಗಳನ್ನು ಪರಿಶೀಲಿಸಿದಾಗ ಮೇಲೆ ತಿಳಿಸಿದ ವಾಹನದ ನಂಬರು ದಿಃ 16–10–2018 ರಂದು ಮಾತ್ರ ಒಂದು ಬಾರಿ ರಿಜಿಸ್ಟರ್ ನಲ್ಲಿ ನಮೂದಾಗಿರುತ್ತದೆ. ಕಾರವಾರ ಪೊಲೀಸರು ನನ್ನನ್ನು ಎಂದಿಗೂ ವಿಚಾರಣೆಗೆ ಕರೆದಿರುವುದಿಲ್ಲ ಹಾಗೂ ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ನಾನು ಆದಿನ ಚೆಕ್ ಪೋಸ್ಟಿನಲ್ಲಿ ಪಾಳಿಯಲ್ಲಿದ್ದೆನು ಹಾಗೂ ಮೇಲೆ ತಿಳಿಸಿದ ವಾಹನದ ಸಂಖ್ಯೆಯನ್ನು ರಿಜಿಸ್ಟರಿನಲ್ಲಿ ನಮೂದಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ಆರ್.ಎಫ್.ಓ. ಹಾಗೂ ಪೊಲೀಸರ ಮಾತು ಕೇಳಿ ನಿಪಿ–54 ರಲ್ಲಿ ಮೇಲೆ ತಿಳಿಸಿದ ವಾಹನದ ನಂಬರನ್ನು ನಾನೇ ಬರೆದಿರುತ್ತೇನೆ ಎಂದರೆ ಸರಿಯಲ್ಲ. ದಿಃ 16–10–2018 ರಂದು ನಾನು ಸಾಕಳಿ ಚೆಕ್ ಪೋಸ್ಟಿನಲ್ಲಿ ಕರ್ತವ್ಯ ನಿರ್ವಹಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನನ್ನನ್ನು ಬಿಟ್ಟು ಬೇರೆ ಮತ್ತೆ ಯಾರನ್ನು ವಿಚಾರಣೆ ಮಾಡಿರುತ್ತಾರೆ ಎಂದು ನನಗೆ ತಿಳಿದಿಲ್ಲ.

**ಪಾಟೀ ಸವಾಲುಃ 4 ನೇ ಆರೋಪಿಯ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–**

ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿಯ ಪರ ಶ್ರೀ ಹೆಚ್.ಎಸ್.ಎಸ್. ವಕೀಲರಿಂದಃ–**

ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ